ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಜಿಲ್ಲೆ

ದೂರವಾಣಿ : 08192-263462
ಫ್ಯಾಕ್ಸ್ : 08192-260969
ಜನವರಿ-ಮಾರ್ಚ್ 2010

ತ್ರೈಮಾಸಿಕ ಪತ್ರಿಕೆ
Quarterly News Letter

ಮಿಂಚಂಚೆ: dvgtkvk@yahoo.com
Website: www.taralabalukvk.com
ಸಂಪುಟ-3, ಸಂಚಿಕೆ-2

## ಸಿಂಚನಕ್ಕೆ ಮುನ್ನ:

ಬಂಧುಗಳೇ,

ಕಳೆದ ಮೂರು ತಿಂಗಳುಗಳ ಅವಧಿಯಲ್ಲಿ ವಿಸ್ತರಣಾ ಚಟುವಟಿಕೆಗಳಿಗೆ ಒತ್ತು ನೀಡಿ, ಭರಪೂರ ಕಾರ್ಯಕ್ರಮಗಳನ್ನು ನಡೆಸಿದೆವು. ಕೃಷಿ ವಿಜ್ಞಾನ ಕೇಂದ್ರದ ಕದಳೀವನವು ಹೆಚ್ಚು ಕಡಿಮೆ ಪ್ರತಿದಿನವೂ ರೈತರಿಂದ ತುಂಬಿದ್ದು, ಯಶಸ್ವಿ ಕಾರ್ಯಕ್ರಮಗಳಿಗೆ ಇಂಬು ಕೊಟ್ಟಿದ್ದು ಕಂಡು ಬರುತ್ತಿತ್ತು. ಇಡೀ ಸಿಬ್ಬಂದಿವರ್ಗ ಕ್ರಿಯಾಶೀಲತೆಯಿಂದ ಚಟುವಟಿಕೆಗಳನ್ನು ನಡೆಸಿ, ಸಂಸ್ಥೆಗೆ ಒಳ್ಳೆಯ ಹೆಸರು ತರುವಲ್ಲಿ ಶ್ರಮಿಸಿದ್ದಾರೆ. ಜನವರಿಯಲ್ಲಿ ನಡೆದ 'ಅಕ್ಕಿ ಕಾರ್ಯಾಗಾರ'ವು ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರಿಂದ ಉದ್ಘಾಟಿತ ಆಶೀರ್ವಾದ ಪಡೆದು, ಅತ್ಯಂತ ಅರ್ಥಪೂರ್ಣವಾಗಿ ಮುಗಿಯಿತು. ಹೆಚ್ಚು ಭತ್ತ ಬೆಳೆಯುವ ನಮ್ಮ ಜಿಲ್ಲೆಯಲ್ಲಿ, ರೈತರು ಹೆಚ್ಚು ಆದಾಯಗಳಿಸಲಿಕ್ಕೆ ಬೇಕಾದ ಮಾರ್ಗಗಳ್ಯಾವುವು ಎಂಬುದರ ಬಗ್ಗೆ ಗಹನ ಚರ್ಚೆ ಈ ಕಾರ್ಯಾಗಾರದಲ್ಲಿ ನಡೆಯಿತು. ನಂತರದ ದಿನಗಳಲ್ಲಿ ಸಿರಿಗೆರೆಯಲ್ಲಿ ನಡೆದ ತರಳಬಾಳು ಹುಣ್ಣಿಮೆ ಪ್ರಯುಕ್ತದ ಕೃಷಿ ಮೇಳ ಮತ್ತು ಗೋಷ್ಠಿಗಳು ನಮ್ಮನ್ನು ಸಾಕಷ್ಟು ಬ್ಯುಸಿಯಾಗಿಟ್ಟಿದ್ದವು. ಸಂಪ್ರದಾಯದಂತೆ ಹುಣ್ಣಿಮೆ ಮಹೋತ್ಸವಕ್ಕೆ ಬರುವಂತೆ ಜನಸಾಗರ ಹರಿದು ಬರದಿದ್ದರೂ, ಸಣ್ಣ ಹಳ್ಳ ಕೊಳ್ಳಗಳ ರೂಪದಲ್ಲಿ ಬಂದು ಭಾಗವಹಿಸಿದ್ದಷ್ಟೆ ಸಮಾಧಾನ.

ಫೆಬ್ರವರಿಯಿಂದ ಪ್ರಾರಂಭಿಸಿ ಮಾರ್ಚ್ ಕಡೆಯವರೆಗೆ ಜೆಎಸ್‌ವೈಎಸ್ ಯೋಜನೆ ಅಡಿಯಲ್ಲಿ ದಾವಣಗೆರೆ ಮತ್ತು ಶಿಕಾರಿಪುರ ಘಟಕದಲ್ಲಿನ ಒಟ್ಟು 500 ಕ್ಕೂ ಹೆಚ್ಚಿನ ರೈತ ಮಿತ್ರರಿಗೆ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದ್ದು ಒಂದು ವಿಶಿಷ್ಟ Marathon ಓಟದಂತಿತ್ತು. ತರಬೇತಿ ಸಂದರ್ಭದಲ್ಲಿ ಶ್ರೀ ರೇಣುಕಾರ್ಯ ಎಂ ಕೆ ಇವರ ಒಣಭೂಮಿ ಸಮಗ್ರ ಕೃಷಿ ಮಾದರಿ ತೋಟಕ್ಕೆ ನಡೆಸುತ್ತಿದ್ದ ಶೈಕ್ಷಣಿಕ ಭೇಟಿ ಅತ್ಯಂತ ಆಕರ್ಷಣೀಯ ಅಂಶವಾಗಿತ್ತು. ಎಲ್ಲಾ ರೈತರು ಈ ಭೇಟಿಯ ಪ್ರಾಮುಖ್ಯತೆಯನ್ನು ಹೊಗಳಿದ್ದೆ ಹೊಗಳಿದ್ದು. ಜೊತೆಗೆ, ತೋಟಗಾರಿಕೆ ಇಲಾಖೆಯ ಪ್ರಾಯೋಜಕತ್ವದ ಸಾವಯವ ಕೃಷಿ ಯೋಜನೆ ಅಡಿಯಲ್ಲಿ ಆಯ್ದ ರೈತರುಗಳಿಗೆ ಹಲವಾರು ತರಬೇತಿ ಪ್ರಾತ್ಯಕ್ಷಿಕೆಗಳ ಮೂಲಕ ಮೂಡಿದ್ದು ವಿಶೇಷವಾಗಿತ್ತು. ನಂತರದ ದಿನಗಳಲ್ಲಿ ಕಾಸರಗೋಡಿನ ಶ್ರೀ ಡಾ. ಚಂದ್ರಶೇಖರ ಚೌಟರವರು ನೀಡಿದ ತೆಂಗಿನ ಬಗ್ಗೆ ಪ್ರವಚನ, ರ್‍ಯಾಲೀಸ್ ಇಂಡಿಯಾ ಜೊತೆಗಿನ ವಿಶ್ವ ತೇವಾಂಶಭರಿತ ಭೂ ಪ್ರದೇಶದ ದಿನ ಮತ್ತು ವಿಶ್ವ ಜಲದಿನ ಆಚರಣೆಗಳು, ಚಿತ್ರದುರ್ಗದ ಶ್ರೀ ದೇವರಾಜರೆಡ್ಡಿಯವರ ಮಳೆಕೊಯ್ಲು ಮತ್ತು ಅಂತರ್ಜಲ ಮರುಪೂರಣ ಕಾರ್ಯಾಗಾರ ಇವುಗಳು ರೈತರೊಂದಿಗಿನ ಒಡನಾಟವನ್ನು ಮತ್ತಷ್ಟು ಹೆಚ್ಚಿಸಿದ್ದವು. ಏತನ್ಮಧ್ಯೆ, ಜೈವಿಕ ತಂತ್ರಜ್ಞಾನ ಇಲಾಖೆ ಯೋಜನೆ ಅಡಿಯಲ್ಲಿ ಸಮಾನಾಸಕ್ತ ಗುಂಪುಗಳ ರಚನೆಯಲ್ಲಿ ಪ್ರಗತಿ ಸಾಧಿಸಿದ್ದು, ಸುಮಾರು 8 ಹೊಸ ಸಂಘಗಳ ರಚನೆಯಾಗಿದ್ದು, ಪ್ರತಿ ಸಂಘವು ಒಂದು ಹೊಸ ಚಟುವಟಿಕೆಯನ್ನು ಹಮ್ಮಿಕೊಂಡಿದೆ. ತರಬೇತಿ ಪಡೆಯೋದು, ನೀಡೋದು, ಬೆಳೆಗಳ ಸಮಸ್ಯೆಗಳಿಗೆ ಸ್ಪಂದಿಸೋದು, ಸಭೆ-ಸಂವಾದಗಳು, ಉಪನ್ಯಾಸಗಳು ಇವುಗಳನ್ನೆಲ್ಲಾ ಮಾಡ್ತಾ, ಈ ವರ್ಷದ ಅಂದ್ರೆ 2010-11ರ ಸಾಲಿನ ಕ್ರಿಯಾಯೋಜನೆ ತಯಾರಿ ಮಾಡಿದ್ದೇವೆ. ಮುಂದಿನ ವಾರ ಅದರ ಮಂಡನೆ. ನಮ್ಮೆಲ್ಲಾ ಯೋಜನೆಗಳಿಗೆ ಅಸ್ತು ಸಿಕ್ಕರೆ, ಕೈ-ಮೈ ತುಂಬಾ ಈ ವರ್ಷ ಪೂರ್ತಿ ಕೆಲಸ, ಮನಸ್ಸಿಗೆ ತೃಪ್ತಿ, ಸಂತೋಷ.

ಕಲ್ಲು ಕರಗುವ ಸುಡು ಬಿಸಿಲು, ಕಣ್ಣುಮುಚ್ಚಾಲೆಯಾಡುವ ಮಳೆಮೋಡಗಳು, ಮುಗಿದ ಯುಗಾದಿ ಹಬ್ಬ, ಮಿಂಚಿ ಮರೆಯಾದ ಸೀಳು ಚಂದ್ರ, ice cream ನಂತೆ ಕರಗಿದ ಚಳಿ, ನಮ್ಮ ರೈತರಿಗೆ ಬೇಸಿಗೆ ಬೆಳೆಗಳನ್ನು ಬೆಳೆಯಲು ಬೆನ್ನು ತಟ್ಟುತ್ತಿಲ್ಲ. ಬೆಳೆದ ಭತ್ತವನ್ನು ನೋಡುತ್ತಾ, ಕಾಲುವೆ ನೀರಲ್ಲಿ ಕಾಲುಗಳ ತೊಯ್ಸುತ್ತಾ ಮೆಣಸಿನ ಕಾಯಿ ಬೋಂಡಾ ತಿನ್ನುವ ನಮ್ಮ ರೈತರು, ಮಳೆಗಾಲದ ಮನ್ವಂತರಕ್ಕೆ ಮನ ತೆರೆದು ನಿಂತಿದ್ದಾರೆ. ಇದಕ್ಕೆಲ್ಲಾ ಸ್ಪಂದಿಸುತ್ತಾ, ಹೊಸ ವಿಜ್ಞಾನ-ತಂತ್ರಜ್ಞಾನಗಳನ್ನು ತಂದು ತೋರಿಸಿ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅಳಿಲು ಸೇವೆಯ ಕೈಂಕರ್ಯದ ಇರಾದೆ ಹೊತ್ತ ನಮ್ಮ ತಂಡ ಅಗತ್ಯದ ಸಾಮು ಮಾಡುವುದರಲ್ಲಿ ನಿರತವಾಗಿದೆ. ದೇವರು ಮತ್ತು ಶ್ರೀ ತರಳಬಾಳು ಜಗದ್ಗುರುಗಳ ಆಶೀರ್ವಾದಗಳೊಂದಿಗೆ ನಿಮ್ಮ ಶುಭ ಹಾರೈಕೆಗಳು ನಮಗೆ ಬೇಸಿಗೆ ಬೆವರನ್ನು ತಂಪಾಗಿಸುತ್ತವೆ. ತಡವೇಕೆ, ಹಾರೈಸಿ, ಬೆಳವಣಿಗೆಗೆ ಸಲಹೆಗಳನ್ನು ನೀಡಿ.

ಧನ್ಯವಾದಗಳು.

-ಡಾ. ದೇವರಾಜ ಟಿ.ಎನ್

## ವಿಶೇಷ ಆಚರಣೆಗಳು:

- ದಿನಾಂಕ 20-03-10 ರಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ 8ನೇ 'ವೈಜ್ಞಾನಿಕ ಸಲಹಾ ಸಮಿತಿ' ಸಭೆಯಲ್ಲಿ ಶ್ರೀ ಆರ್.ಎಸ್.ರಾಮಮೂರ್ತಿ,ಪ್ರೋಗ್ರಾಮ್ ಆಫೀಸರ್, ವಲಯ ಯೋಜನಾ ನಿರ್ದೇಶನಾಲಯ, ವಲಯ 8, ಬೆಂಗಳೂರು ಇವರು ಭಾಗವಹಿಸಿ, ಕೇಂದ್ರದ ಪ್ರಗತಿಗೆ ಸಲಹೆ ಸೂಚನೆಗಳನ್ನು ನೀಡಿದರು.



ಮಾತೃ ಸಂಸ್ಥೆ: ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ 577 541, ಚಿತ್ರದುರ್ಗ ತಾ॥ ದೂರವಾಣಿ: 08194-268829

* ದಿನಾಂಕ 26 ರಿಂದ 28 ಜನವರಿ 2010 ರವರೆಗೆ 'ಸಾವಯವ ಅಕ್ಕಿ ಸಂಸ್ಕರಣೆ ಹಾಗೂ ಮಾರುಕಟ್ಟೆ' ಕುರಿತು ತರಳಬಾಳು ಕೆವಿಕೆ, ಶರಣ ಮುದ್ದಣ್ಣ ಸಾವಯವ ಕೃಷಿಕರ ಬಳಗ, ಕುಂಬಳೂರು ಮತ್ತು ಸಹಜ ಸಮೃದ್ಧ, ಬೆಂಗಳೂರು ಇವರುಗಳ ಸಹಯೋಗದಲ್ಲಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ತರಳಬಾಳು ಶಾಖಾ ಮಠ, ಸಾಣೆಹಳ್ಳಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಎಸ್. ಎ. ರವೀಂದ್ರನಾಥ್, ಸನ್ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ ಮತ್ತು ಶ್ರೀ ಜಿ. ಎಂ. ಸಿದ್ದೇಶ್ವರ, ಸನ್ಮಾನ್ಯ ಲೋಕಸಭಾ ಸದಸ್ಯರು, ದಾವಣಗೆರೆ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



* ಸಿರಿಗೆರೆಯಲ್ಲಿ ದಿನಾಂಕ 28 ರಿಂದ 30 ಜನವರಿ 2010 ರವರೆಗೆ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಜೈವಿಕ ತಂತ್ರಜ್ಞಾನ ಇಲಾಖೆ ಪ್ರಾಯೋಜಕತ್ವದಲ್ಲಿ 'ಕೃಷಿ ಮೇಳ'ವನ್ನು ಆಯೋಜಿಸಲಾಗಿತ್ತು. ಈ ಕೃಷಿ ವಸ್ತು ಪ್ರದರ್ಶನದಲ್ಲಿ ಸಾವಿರಾರು ರೈತರು, ರೈತ ಮಹಿಳೆಯರು ಮತ್ತು ಶಾಲಾ ಮಕ್ಕಳು ಕೃಷಿ ಹಾಗೂ ಕೃಷಿಯೇತರ ವಿಷಯಗಳ ಬಗ್ಗೆ ಮಾಹಿತಿ ಪಡೆದಿರುತ್ತಾರೆ.






* ದಿನಾಂಕ 28-02-2010 ರಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಆಪ್ಟಿಮಾ ಅಗ್ರಿ ಸೀಡ್ಸ್ ಪ್ರೈ.ಲಿ., ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ'ಯನ್ನು ಆಚರಿಸಲಾಯಿತು.




← ದಿನಾಂಕ 25-02-10 ರಂದು ಕೇಂದ್ರದಲ್ಲಿ 'ತೆಂಗಿನಲ್ಲಿ ಎಲೆ ತಿನ್ನುವ ಹುಳುವಿನ ನಿರ್ವಹಣೆ' ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಶ್ರೀ ಚಂದ್ರಶೇಖರ ಚೌಟ, ಕಾಸರಗೋಡು ಮತ್ತು ಶ್ರೀ ರೇಣುಕಾರ್ಯ ಎಂ ಕೆ, ದಾವಣಗೆರೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ದಿನಾಂಕ 22-03-2010 ರಂದು ನಮ್ಮ ಕೇಂದ್ರ, ವಾಟರ್ ಲಿಟರಸಿ ಫೌಂಡೇಶನ್, ಬೆಂಗಳೂರು ಹಾಗೂ ರ್‍ಯಾಲೀಸ್ ಇಂಡಿಯಾ ಲಿ. ಇವರುಗಳ ಸಂಯುಕ್ತಾಶ್ರಯದಲ್ಲಿ 'ವಿಶ್ವ ಜಲ' ದಿನಾಚರಣೆಯನ್ನು ರಸ್ತೆ ಜಾಥಾದೊಂದಿಗೆ ಆರಂಭಿಸಲಾಯಿತು. **ಶ್ರೀ ಅಮರನಾರಾಯಣ**, ಜಿಲ್ಲಾಧಿಕಾರಿಗಳು, ದಾವಣಗೆರೆ ಇವರು ಉದ್ಘಾಟಿಸಿದರು. **ಶ್ರೀ ಅಯ್ಯಪ್ಪ** ಮಸಗಿಯವರು ಮತ್ತು ಜಿಲ್ಲಾಧಿಕಾರಿಗಳು ಉಪನ್ಯಾಸ ನೀಡಿದರು.






'ವಿಶ್ವ ಜಲ' ದಿನಾಚರಣೆಯ ಅಂಗವಾಗಿ ಕೇಂದ್ರದಲ್ಲಿ ದಿನಾಂಕ 26-03-10 ರಂದು 'ಮಳೆನೀರು ಕೊಯ್ಲು' ಎಂಬ ವಿಷಯದ ಬಗ್ಗೆ ಕೇಂದ್ರದಲ್ಲಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ **ಶ್ರೀ ದೇವರಾಜ ರೆಡ್ಡಿ ಎನ್ ಜೆ.,** ಜಿಯೋ ರೈನ್‌ವಾಟರ್ ಬೋರ್ಡ್, ಚಿತ್ರದುರ್ಗ ಇವರು ರೈತರಿಗೆ ಮಾಹಿತಿ ನೀಡಿದರು.



## ವಿವಿಧ ಕಾರ್ಯಕ್ರಮಗಳು:

### ರೈತರಿಗೆ ತರಬೇತಿಗಳು:

| ದಿನಾಂಕ | ತರಬೇತಿ ವಿಷಯ | ಸ್ಥಳ | ಭಾಗವಹಿಸಿದ ತಜ್ಞರು |
|---|---|---|---|
| 05-01-2010 | ವೈಜ್ಞಾನಿಕ ಹೈನುಗಾರಿಕೆ | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ | ಡಾ. ಜಯದೇವಪ್ಪ ಜಿ ಕೆ |
| 07-01-2010 | ಮಣ್ಣು ಪರೀಕ್ಷೆಯ ಮಹತ್ವ, ಸಮಸ್ಯಾತ್ಮಕ ಮಣ್ಣು ಹಾಗೂ ಪೋಷಕಾಂಶಗಳ ನಿರ್ವಹಣೆ | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ | ಡಾ. ಪ್ರದೀಪ್ ಹೆಚ್ ಎಂ |
| 08-01-2010 | ದ್ವಿದಳ ಧಾನ್ಯಗಳಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ | ಶ್ರೀ ಮಲ್ಲಿಕಾರ್ಜುನ ಬಿ ಓ |
| 16-02-2010 | ಭತ್ತ, ಮೆಕ್ಕೆಜೋಳ, ಶೇಂಗಾ ಹಾಗೂ ಇನ್ನಿತರ ಕೃಷಿ ಬೆಳೆಗಳಲ್ಲಿ ರೋಗ ಮತ್ತು ಕೀಟ ನಿರ್ವಹಣೆ | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ | ಶ್ರೀ ಪ್ರಸನ್ನಕುಮಾರ ಎನ್ |
| 06-03-2010 | ದ್ವೈಮಾಸಿಕಾ ಕಾರ್ಯಾಗಾರ | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ | ಡಾ. ಟಿ ಎನ್ ದೇವರಾಜ, ಶ್ರೀ ಪ್ರಸನ್ನಕುಮಾರ ಎನ್ ಡಾ ಪ್ರದೀಪ್ ಹೆಚ್ ಎಂ. |
| 04-01-2010 | ಅಧಿಕ ಇಳುವರಿ ಕೊಡುವ ತೊಗರಿಯ ಉತ್ಪಾದನಾ ತಾಂತ್ರಿಕತೆ | ಅಸಗೋಡು, ಕೃಷಿ ಇಲಾಖೆ, ಜಗಳೂರು ತಾಲ್ಲೂಕು | ಶ್ರೀ ಮಲ್ಲಿಕಾರ್ಜುನ ಬಿ ಓ |
| 11-01-2010 | ಒಳನಾಡು ಕೊಳಗಳಲ್ಲಿ ಮೀನುಗಾರಿಕೆ | ವಾಣಿವಿಲಾಸ ಸಾಗರ, ಮೀನುಗಾರಿಕಾ ಇಲಾಖೆ, ಹಿರಿಯೂರು ತಾಲ್ಲೂಕು | ಡಾ. ಟಿ ಎನ್ ದೇವರಾಜ, |

### ಕೇಂದ್ರದ ತಜ್ಞರಿಗೆ ತರಬೇತಿ:

| ದಿನಾಂಕ | ತರಬೇತಿ ವಿಷಯ | ಆಯೋಜಕರು ಮತ್ತು ಸ್ಥಳ | ಭಾಗವಹಿಸಿದ ತಜ್ಞರು |
|---|---|---|---|
| 03 ರಿಂದ 11 ಜನವರಿ 2010 | Extension management for Horticulture development | ಮ್ಯಾನೇಜ್ (MANAGE), ಹೈದರಾಬಾದ್ | ಶ್ರೀ ಬಸವನಗೌಡಎಂ ಜಿ |
| 10 ರಿಂದ 14 ಮಾರ್ಚ್ 2010 | ತೋಟಗಾರಿಕೆ ಬೆಳೆಗಳಲ್ಲಿ ಗುಣಮಟ್ಟದ ಸಸಿಗಳ ಮಹತ್ವ | ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ | ಶ್ರೀ ಬಸವನಗೌಡ ಎಂ ಜಿ |
| 12 ಫೆಬ್ರವರಿ 2010 | Sensitization workshop on coconut leaf beetle | National Bureau of Agriculturally Important Insects, Hebbal, Bangalore | ಶ್ರೀ ಪ್ರಸನ್ನಕುಮಾರ ಎನ್ |
| 18 ರಿಂದ 22 ಮಾರ್ಚ್ 2010 | Team work and Building Alliances for Development | Karl Kubal Institute for Development, Coimbatore | ಶ್ರೀ ರಘುರಾಜ ಜೆ |

### ಪ್ರಾಯೋಜಿತ ಕಾರ್ಯಕ್ರಮಗಳು:

- ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮತ್ತು ಜಲಸಂವರ್ಧನೆ ಯೋಜನಾ ಸಂಘ ಪ್ರಾಯೋಜಿತ 'ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ತಾಂತ್ರಿಕ ತರಬೇತಿ' ಕುರಿತು 3 ದಿನಗಳ ಒಟ್ಟು 10 ಕಾರ್ಯಕ್ರಮಗಳು ಹಾಗೂ 'ರೈತರಿಗೆ ಪರಿಸರ ನಿರ್ವಹಣಾ ಯೋಜನೆಯ' 2 ದಿನದ ಒಟ್ಟು 4 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.
- 2008-09ನೇ ಸಾಲಿನ ಕೇಂದ್ರ ಪುರಸ್ಕೃತ 'National Project on Organic Farming' ಯೋಜನೆಯಡಿ ತೋಟಗಾರಿಕೆ ಇಲಾಖೆ ಪ್ರಾಯೋಜಿತ 'ಸಾವಯವ ಕೃಷಿ' ಕುರಿತು 2 ದಿನದ ಒಟ್ಟು 10 ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು.



### ಆಕಾಶವಾಣಿ ಕಾರ್ಯಕ್ರಮಗಳು:

- 'ಕೃಷಿಯಲ್ಲಿ ಸಾವಯವ ಗೊಬ್ಬರದ ಮಹತ್ವ'-ಶ್ರೀ ಮಲ್ಲಿಕಾರ್ಜುನ ಬಿ.ಓ. (ಚಿತ್ರದುರ್ಗ, 10-01-2010)
- 'ಆಹಾರದಲ್ಲಿ ಹಣ್ಣು ಮತ್ತು ಹಸಿರು ತರಕಾರಿಗಳ ಮಹತ್ವ' -ಕವಿತಾ ಪಿ. (ಭದ್ರಾವತಿ, 15-02-2010)

**ಕ್ಷೇತ್ರೋತ್ಸವ:** ಬೂದಿರೋಗ ನಿರೋಧಕ ತಳಿ KBSH–53 ಸೂರ್ಯಕಾಂತಿ ಹೈಬ್ರಿಡ್‌ನ ಕ್ಷೇತ್ರೋತ್ಸವವನ್ನು ಅಣಜಿಗೆರೆ, ಹರಪನಹಳ್ಳಿ ತಾ॥, ದಿನಾಂಕ 13–03–2010ರಂದು ಆಚರಿಸಲಾಯಿತು. ದಿನಾಂಕ 19–03–2010ರಂದು ಶ್ರೀ ರಾಮಮೂರ್ತಿ ಆರ್ ಎಸ್, ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು ಇವರು ಕ್ಷೇತ್ರ ಭೇಟಿಯಲ್ಲಿ ರೈತರೊಂದಿಗೆ ಸಂವಾದ ನೆಡೆಸಿದರು.



## ಕೃಷಿ ಮುನ್ಸೂಚನೆಗಳು :

### ಮೆಕ್ಕೆಜೋಳ :

- ಮುಂಗಾರಿನ ಬೆಳೆ ಬಿತ್ತನೆ ಮೊದಲು ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರ ಬಳಸಬೇಕು.
- ಬೀಜವನ್ನು ಮೇ ತಿಂಗಳಿನಿಂದ ಜುಲೈ ತಿಂಗಳ ಕೊನೆಯೊಳಗಾಗಿ ಬಿತ್ತನೆ ಮಾಡಬೇಕು.
- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಬಿಡುಗಡೆ ಮಾಡಿರುವ ಅಧಿಕ ಇಳುವರಿ ಕೊಡುವ ಎನ್‌ಎಹೆಚ್–2049 ಮತ್ತು ಎನ್‌ಎಹೆಚ್– 1137 ಬಳಸಬಹುದು.
- ಬಿತ್ತನೆಗೆ 3 ವಾರ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್‌ನ್ನು ಮಣ್ಣಿನಲ್ಲಿ ಸೇರಿಸಬೇಕು.
- ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ 100:50:25 ಎನ್ ಪಿ ಕೆ ಕೆಜಿ/ಹೆ (ಮಳೆಯಾಶ್ರಿತ) ಬಳಸಬೇಕು
- ಅಂತರ ಬೆಳೆಯಾಗಿ ತೊಗರಿಯನ್ನು 8:2 ಸಾಲುಗಳಲ್ಲಿ ಬೆಳೆಯಬಹುದು.

### ಹೆಸರು :

- ಎಪ್ರಿಲ್– ಮೇ ಬಿತ್ತನೆಗೆ ಸೂಕ್ತ ಸಮಯವಾಗಿದ್ದು ಅಧಿಕ ಇಳುವರಿ ಕೊಡುವ ತಳಿಯಾದ ಪಿಎಸ್–16 ನ್ನು ಎಕರೆಗೆ 15 ರಿಂದ 20 ಕೆಜಿ ಬೀಜ ಬಳಸಬಹುದು.
- ಜೈವಿಕ ಗೊಬ್ಬರ ರೈಝೋಬಿಯಂ ಮತ್ತು ರಂಜಕ ಕರಗಿಸುವ ಜೀವಾಣು (ಪಿಎಸ್‌ಬಿ) 500 ಗ್ರಾಂ ಉಪಯೋಗಿಸಿ ಬೀಜೋಪಚಾರ ಮಾಡಬೇಕು.

### ಹತ್ತಿ :

- ಅಧಿಕ ಇಳುವರಿ ಕೊಡುವ ಬಿಟಿ ಹತ್ತಿ ತಳಿಯನ್ನು ಬಳಸಬಹುದು.
- ಗಿಡದಿಂದ ಗಿಡಕ್ಕೆ 4 ಅಡಿ ಮತ್ತು ಸಾಲಿನಿಂದ ಸಾಲಿಗೆ 4 ಅಡಿ ಅಂತರದಲ್ಲಿ ಬಿತ್ತನೆ ಮಾಡಬೇಕು.
- ಮೇ ತಿಂಗಳಲ್ಲಿ ಬಿತ್ತನೆ ಮಾಡಿದರೆ ಅಧಿಕ ಇಳುವರಿ ಪಡೆಯಬಹುದು.
- ಹತ್ತಿ ಬೆಳೆಯನ್ನು ಬಿತ್ತುವಾಗ 25 ಸಾಲು ಹತ್ತಿಗೆ ಒಂದು ಸಾಲು ಬೆಂಡಿ/ಚೆಂಡುಹೂವು ಬೆಳೆಯನ್ನು ಬಲೆ ಬೆಳೆಯಾಗಿ ರಸಹೀರುವ ಕೀಟಗಳ ಹತೋಟಿಗೆ ಬಿತ್ತಬೇಕು.

### ಭತ್ತ ಕಂದು ಜಿಗಿ ಹುಳು :

**ಲಕ್ಷಣಗಳು :** ಅಪ್ಸರೆ ಮತ್ತು ಪ್ರೌಢಕೀಟಗಳು ಕಾಂಡದ ಮೇಲೆ ಆವರಿಸಿ ರಸಹೀರುವುದರಿಂದ ಗರಿಗಳು ಹಳದಿಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣುತ್ತವೆ.

**ಹತೋಟಿ :** ಕೀಟಬಾಧೆ ಕಂಡ ತಕ್ಷಣ ಥಯೋಮೆಥಾಕ್ಸಾಂ 25 ಡಬ್ಲ್ಯು. ಜಿ. (0.5 ಗ್ರಾಂ/ಲೀ) ಅಥವಾ ಬುಪ್ರೊಫೆಜಿನ್ (1.5 ಮಿಲಿ./ಲೀ) ಸಿಂಪಡಿಸಬೇಕು.

### ಬೆಂಕಿ ರೋಗ :

**ಲಕ್ಷಣಗಳು :** ಕಂದು ಬಣ್ಣದ ಚುಕ್ಕೆಗಳು ಎಲೆ, ತೆನೆ ಹಾಗೂ ಕಾಳುಗಳ ಮೇಲೆ ಕಾಣಿಸಿಕೊಳ್ಳುತ್ತವೆ. ನಂತರ ಚುಕ್ಕೆಗಳ ಗಾತ್ರ ಹೆಚ್ಚಾಗಿ ಬೆಂಕಿಯಿಂದ ಸುಟ್ಟಂತೆ ಕಾಣುತ್ತವೆ. ತೆನೆಯ ಬುಡದ ಗಣ್ಣಿಗೆ ರೋಗ ತಗುಲಿ ಮುರಿದು ಬೀಳುತ್ತವೆ. ಕಾಳುಗಳ ಜೊಳ್ಳಾಗುತ್ತವೆ.

**ಹತೋಟಿ :** ರೋಗದ ಲಕ್ಷಣಗಳು ಕಂಡ ತಕ್ಷಣ ಟ್ರೈಸೈಕ್ಲಜೋಲ್ (0.6 ಗ್ರಾಂ/ಲೀ) ಅಥವಾ ಐಸೋಪ್ರೋಥಿಯೊಲೇನ್ (ಫುಜಿವನ್) 1.5 ಮಿಲಿ./ಲೀ)ಸಿಂಪಡಿಸಬೇಕು.

### ಬಾಳೆ - ಸೊರಗು ರೋಗ :

**ಲಕ್ಷಣಗಳು :** ಪ್ರಾರಂಭದಲ್ಲಿ ಎಲೆಯ ತೊಟ್ಟಿನ ಭಾಗದಲ್ಲಿ ಹಳದಿ ಗೆರೆಗಳು ಕಂಡು ನಂತರ ಮುರಿದು ಬೀಳುತ್ತವೆ. ಎಲೆಯ ಅಂಚಿನ ಭಾಗ ಒಣಗಿ ಕಾಂಡದಲ್ಲಿ ಉದ್ದನೆಯ ಬಿರುಕುಗಳು ಕಾಣಿಸುತ್ತವೆ.

**ಹತೋಟಿ :** ರೋಗರಹಿತ ತೋಟಗಳಿಂದ ಗಡ್ಡೆಯನ್ನು ಆಯ್ಕೆ ಮಾಡಬೇಕು. ನಾಟಿ ಮಾಡುವಾಗ, ನಂತರ 2, 4 ಮತ್ತು 6 ತಿಂಗಳಲ್ಲಿ ಪ್ರತಿ ಗಿಡಕ್ಕೆ 20–50 ಗ್ರಾಂ ಟ್ರೈಕೋಡರ್ಮ ಹಾಕಬೇಕು. ರೋಗಕ್ಕೆ ತುತ್ತಾದ ಗಿಡಗಳಿಗೆ ಬೇವಿಸ್ಟಿನ್ (2 ಗ್ರಾಂ/ಲೀ) ಸುತ್ತಲೂ ಭೂಮಿಗೆ ಹಾಕಬೇಕು (3–5 ಲೀ ನೀರು).

### ಅಡಿಕೆ :

ಪ್ರಸ್ತುತ ಮುಂಬರುವ ತಿಂಗಳುಗಳಲ್ಲಿ ಬೇಸಿಗೆಯ ಉಷ್ಣಾಂಶ ಇನ್ನೂ ಹೆಚ್ಚುವ ಸಂಭವವಿದ್ದು, ರೈತರು ಅಡಿಕೆ ತೋಟಗಳಲ್ಲಿ ನೀರಿನ ನಿರ್ವಹಣೆಯನ್ನು ಚೆನ್ನಾಗಿ ಮಾಡಬೇಕು. ಭೂಮಿಯ ಮತ್ತು ಹವಾಗುಣಕ್ಕನುಸಾರವಾಗಿ ತೇವಾಂಶವನ್ನು ಕಾಪಾಡಬೇಕು. ಇಲ್ಲವಾದರೆ ಅಡಿಕೆಯ ಹರಳು ಉದುರುವ ಸಮಸ್ಯೆ ತೀವ್ರವಾಗುವುದು. ಬೇಸಿಗೆಯ ತಿಂಗಳುಗಳಲ್ಲಿ ಅಂತರಬೇಸಾಯವನ್ನು ಮಾಡಬಾರದು. ಇದರಿಂದ ತೇವಾಂಶವನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು. ಮೇ ಅಥವಾ ಜೂನ್ ತಿಂಗಳಿನಲ್ಲಿ ಶಿಫಾರಸ್ಸಿನಂತೆ 100:40:140 ಗ್ರಾಂ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಮಿಶ್ರಣದ ಅರ್ಧ ಭಾಗವನ್ನು ಕೊಟ್ಟು, ಉಳಿದರ್ಧವನ್ನು ಸೆಪ್ಟಂಬರ್–ಅಕ್ಟೋಬರ್ ತಿಂಗಳಿನಲ್ಲಿ ಕೊಡಬೇಕು.

### ತರಕಾರಿ ಬೆಳೆಗಳು :

ತೀವ್ರ ಬಿಸಿಲಿನಿಂದ ತರಕಾರಿ ಬೆಳೆಗಳಿಗೆ ರಸಹೀರುವ ಕೀಟದ ಭಾದೆ ಕಾಡುವ ಸಂಭವವಿದ್ದು, ಅದರ ನಿಯಂತ್ರಣಕ್ಕೆ 2 ಮಿಲೀ ಪ್ರತಿ ಲೀಟರ್‌ನೀರಿಗೆ ಮಾನೋಕ್ರೋಟೋಫಾಸ್ ಅಥವಾ ಡೈಮಿಥೋಯೇಟ್ ಕೀಟನಾಶಕವನ್ನು ಸಿಂಪಡಿಸಬೇಕು.

- ಖಾಲಿ ಬಿಟ್ಟ ಭೂಮಿಗಳಲ್ಲಿ ಗಿಡಮರಗಳನ್ನು ಬೆಳೆಸಿ. ಹೊಂಗೆ, ಜತ್ರೋಫಾದಂಥ ಎಣ್ಣೆ ಬೀಜಗಳಿಂದ ಬಯೋಡೀಸಲ್ ತಯಾರಿಸಬಹುದು. ಶಾಲೆಯ ಆವರಣ, ಪೂಜಾಸ್ಥಾನಗಳ ಹೊರಾಂಗಣ ಮುಂತಾದ ಸ್ಥಳಗಳಲ್ಲಿ ಗಿಡಮರ ಬೆಳೆಸಲು ಪ್ರೇರಣೆ ನೀಡಿ.
- ಅಂತರ್ಜಲದ ದುರುಪಯೋಗವನ್ನು ತಡೆಗಟ್ಟಿ.
- ಮಳೆನೀರು ವ್ಯರ್ಥ ಹೊಳೆ ಹಳ್ಳಕ್ಕೆ ಸೇರದಂತೆ ಜಮೀನಿನಲ್ಲೇ ಇಂಗಿಸಿ.
- ಸಾಧ್ಯವಾದಷ್ಟು ಸಾವಯವ ಆಹಾರ ವಸ್ತುಗಳನ್ನೇ ಬೆಳೆಸಿ, ಬಳಸಿ.
- ಹಣ್ಣಿನ ಗಿಡಗಳ ನರ್ಸರಿ ತಯಾರಿಸಿ. ರಸ್ತೆ ಬದಿಯಲ್ಲಿ, ಕೆರೆಯಂಚಿನಲ್ಲಿ ಎಲ್ಲೆಲ್ಲಿ ಖಾಲಿ ಭೂಮಿಯಲ್ಲಿ ಅವನ್ನು ನೆಡುವಂತೆ ಊರಿನ ಶಾಲೆಗಳಿಗೆ ಪ್ರೇರಣೆ ನೀಡಿ. ಸಸಿಗಳನ್ನು ದಾನ ಕೊಡಿ.

**ಮೀನುಕೃಷಿ :** ಹೊಸದಾಗಿ ಮೀನುಕೃಷಿ ಕೈಗೊಳ್ಳುವವರು, ಕೃಷಿಹೊಂಡ/ಕೊಳಗಳನ್ನು ಕಡ್ಡಿ ಕಸ ತೆಗೆದು, ಅನಾವಶ್ಯಕ ಮೀನುಗಳಿಲ್ಲದಂತೆ ಸ್ವಚ್ಛಗೊಳಿಸಬೇಕು. ಮಳೆಗಾಲದ ಆರಂಭಕ್ಕೆ ಮೀನುಮರಿಗಳು ಲಭ್ಯವಿರುತ್ತವೆ (ಕೊಂಡಜ್ಜಿ & ಶಾಂತಿಸಾಗರ). ತಜ್ಞರ ಸಲಹೆ ಪಡೆದು ದಾಸ್ತಾನು ಮಾಡಬೇಕು. ಈಗಾಗಲೇ, ಮೀನುಗಳಿರುವಂತ ಕೊಳಗಳಲ್ಲಿ ಬೆಳವಣಿಗೆ ಪರೀಕ್ಷೆ ಮಾಡಿ, ಅದಕ್ಕೆ ಪೂರಕವಾಗಿ ಆಹಾರ ಬದಲಾಯಿಸಬೇಕು. ಹುಲ್ಲು ಗೆಂಡೆ ಇದ್ದಲ್ಲಿ, ಹೆಚ್ಚಿನ ಪ್ರಮಾಣದ ಎಳೆ ಹುಲ್ಲನ್ನು (ಹೈಡ್ರಿಲ್ಲಾ/ಲ್ಯುಸರ್ನ್/ಅಜೋಲ್ಲಾ/ನೇಪಿಯರ್) ನೀಡಬೇಕು. ಬೇಸಿಗೆ ಬಿಸಿಗೆ ಭಾಗಶ: ಹೊಸನೀರು (ಸಾಧ್ಯವಿದ್ದಲ್ಲಿ) ತುಂಬಿಸಿ.

ಸಂಪಾದಕರು ಮತ್ತು ಪ್ರಕಾಶಕರು: ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ,
ಬಿ.ಐ.ಇ.ಟಿ. ರಸ್ತೆ, ದಾವಣಗೆರೆ 577 004. ದಾವಣಗೆರೆ ಜಿಲ್ಲೆ.

ಮುದ್ರಕರು: ಅಶ್ವಿ ಪ್ರಿಂಟರ್ಸ್, ದಾವಣಗೆರೆ. ಮೊ: 98457 81782